**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-167/2019**

ಪಿ.ಡಬ್ಲ್ಯೂಃ- 23
ಸಿ.ಡಬ್ಲ್ಯೂಃ- 27

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರವಿಶಂಕರ್ ಸಿ. |
| ತಂದೆಯ ಹೆಸರುಃ | : | ಚೌಡಯ್ಯ ಎಸ್. |
| ವಯಸ್ಸುಃ | : | 50 ವರ್ಷ |
| ವೃತ್ತಿಃ | : | ಪಿಎಸ್ಐ, ಬಿಳಿಗೆರೆ ಪೊಲೀಸ್ ಠಾಣೆ, |
| ವಾಸಃ | : | ಮೈಸೂರು. |

**ದಿನಾಂಕಃ 28-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ನವೆಂಬರ್ ನಿಂದ ಸೆಪ್ಟಂಬರ್ 2018 ರವರೆಗೆ ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿಃ02.01.2018 ರಂದು ಹಾಸನದ ಪೊಲೀಸ್ ಕಂಟ್ರೋಲ್ ರೂಂನಿಂದ ಎಂ ಎಲ್ ಸಿ ಬಗ್ಗೆ ಮಾಹಿತಿ ಬಂದಿದ್ದು ಅದರಂತೆ ಠಾಣಾ ಎಎಸ್ಐ ಚಾಸಾ-26 ಅಫೀಜುಲ್ಲಾ ಶರೀಫ್ ಹಾಗೂ ನಾನು ಹಾಸನದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ತೆರಿಳಿ ಪೊಲೀಸ್ ಔಟ್ ಪೋಸ್ಟ್ ನಿಂದ ಎಂ ಎಲ್ ಸಿ ಯನ್ನು ಸ್ವೀಕರಿಸಿರುತ್ತೇನೆ. ಸುಟ್ಟ ಗಾಯಗಳ

ರೋಗಿಗಳಿಗೆ ಚಿಕಿತ್ಸೆ ನೀಡುವ ವಾರ್ಡ್ ನಂ.260 ಕ್ಕೆ ಭೇಟಿ ನೀಡಿ ಗಾಯಾಳು ಲಕ್ಷ್ಮಿ ಕೋಂ ಜಗದೀಶ್ ಅವರನ್ನು ವಿಚಾರ ಮಾಡಿ ನೀಡಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಗಾಯಾಳುವಿನ ಗಾಯ ಸ್ಥಿತಿ ಗಂಭೀರವಾಗಿದ್ದರಿಂದ ಹಾಗೂ ಗಾಯಾಳು ಬದುಕುವ ಸಾಧ್ಯತೆ ಕಡಿಮೆ ಇದೆ ಎಂದು ವೈದ್ಯರು ತಿಳಿಸಿದ್ದರಿಂದ ಮುಂದಿನ ತನಿಖೆ ಸಂಬಂಧವಾಗಿ ಮಾನ್ಯ ತಹಶೀಲ್ದಾರ್, ಹಾಸನ ತಾಲ್ಲೂಕು ರವರಿಗೆ ಗಾಯಾಳುವಿನ ಮರಣಪೂರ್ವ ಹೇಳಿಕೆಯನ್ನು ಪಡೆದುಕೊಳ್ಳುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ ಅದರಂತೆ ಹಾಸನ ತಾಲ್ಲೂಕಿನ ಮಾನ್ಯ ತಹಶೀಲ್ದಾರ್ ರವರು ಆಸ್ಪತ್ರೆಗೆ ಭೇಟಿ ನೀಡಿ ಲಕ್ಷ್ಮಿ ರವರ ಮರಣಪೂರ್ವ ಹೇಳಿಕೆಯನ್ನು ಪಡೆಯುವ ಸಮಯದಲ್ಲಿ ಅವರೊಂದಿಗೆ ಇದ್ದು ಸಹಕರಿಸಿರುತ್ತೇನೆ. ನಂತರ ಠಾಣೆಗೆ ಹಿಂದಿರುಗಿ ಗಾಯಾಳು ಲಕ್ಷ್ಮಿ ರವರ ಹೇಳಿಕೆ ಮೆರೇಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಠಾಣಾ ಮೊಃನಂ.1/2018 ರಲ್ಲಿ ಐಪಿಸಿ ಕಲಂ. 498(ಎ) ಸಹಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲ್ಮಾಡಿಕೊಂಡಿರುತ್ತೇನೆ ಹಾಗೂ ಪ್ರ ವ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ದಿಃ03.01.2018 ರಂದು ಕೃತ್ಯ ನಡೆದ ಸ್ಥಳವಾದ ಲಕ್ಷ್ಮೀಪುರ ಗ್ರಾಮಕ್ಕೆ ಗಾಯಾಳುವಿನ ಮನೆಗೆ ಭೇಟಿ ನೀಡಿ ಪರಿಶೀಲಿಸಲಾಗಿ ಮನೆಯ ಬಾಗಿಲು ತೆರೆದಿದ್ದು ಅದೇ ಗ್ರಾಮದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-1 ಆನಂದ್ ರವರು ಹಾಜರಿದ್ದು ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ-15 ದೇವರಾಜ್ ಹಾಗೂ ಚಾಸಾ-16 ವಿಜಯ್ ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಮಹಜರನ್ನು ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ತಯಾರಿಸಿರುತ್ತೇನೆ. ಕೃತ್ಯ ನಡೆದ ಸ್ಥಳದಿಂದ ಒಂದು ಪ್ಲಾಸ್ಟಿಕ್ ಕ್ಯಾನ್, ಒಂದು

ಭಾಗಶಃ ಸುಟ್ಟಿರುವ ಮೆರೂನ್ ಬಣ್ಣದ ನೈಟಿ, ಒಂದು ಬೆಂಕಿಪೊಟ್ಟಣವನ್ನು ವಶಕ್ಕೆ ಪಡೆದು ಪ್ರತ್ಯೇಕವಾಗಿ ಬಟ್ಟೆಯ ಚೀಲದಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡು M ಎಂಬ ಅಕ್ಷರದಿಂದ ಸೀಲು ಮಾಡಿ ಮಹಜರಡಿಯಲ್ಲಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಹಿಂದಿರುಗಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಮಾಲುಪಟ್ಟಿ ನಂ.1/2018 ರಲ್ಲಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಠಾಣೆಗೆ ಹಾಜರಾದ ಸಾಕ್ಷಿದಾರರಾದ ಚಾಸಾ-1 ಆನಂದ್, ಚಾಸಾ-3 ಜಯಮ್ಮ ಹಾಗೂ ಚಾಸಾ-4 ಶೋಭ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-1 ಆನಂದ್ ನನ್ನ ಮುಂದೆ ನಿಪಿ-2 ರಂತೆ, ಚಾಸಾ-3 ಜಯಮ್ಮ ನನ್ನ ಮುಂದೆ ನಿಪಿ-4 ರಂತೆ ಹಾಗೂ ಚಾಸಾ-4 ಶೋಭ ನನ್ನ ಮುಂದೆ ನಿಪಿ-5 ರಂತೆ ಅವರ ಹೇಳಿಕೆಗಳನ್ನು ನೀಡಿರುತ್ತಾರೆ. ದಿಃ08.01.2018 ರಂದು ಹಾಸನ ತಾಲ್ಲೂಕಿನ ತಹಶೀಲ್ದಾರ್ ರವರು ಹಾಜರುಪಡಿಸಿದ ಲಕ್ಷ್ಮಿ ರವರ ಮರಣಪೂರ್ವ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಗಾಯಾಳು ಲಕ್ಷ್ಮಿ ರವರ ತಂದೆ ಚಾಸಾ-6 ಮುದ್ದಯ್ಯ ರವರ ಹೇಳಿಕೆಯನ್ನೂ ಸಹ ಪಡೆದುಕೊಂಡಿರುತ್ತೇನೆ. ದಿಃ14.01.2018 ರಂದು ಗಾಯಾಳು ಲಕ್ಷ್ಮಿ ರವರ ತಂದೆಯಾದ ಚಾಸಾ-6 ಮುದ್ದಯ್ಯ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡಿರುತ್ತೇನೆ. ಸದರಿ ದೂರು ಇದೇ ಪ್ರಕರಣಕ್ಕೆ ಸಂಬಂಧಿಸಿದ ಮುಂದುವರಿದ ದೂರು ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಚಸಾ-6 ಮುದ್ದಯ್ಯರವರ ಮುಂದುವರಿದ ದೂರನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ನಿಪಿ-6 ನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ

ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ನಿಪಿ-6 ಮುಂದುವರಿದ ದೂರಿನಲ್ಲಿ ಮುದ್ದಯ್ಯ ರವರು ಅವರ ಮಗಳಾದ ಲಕ್ಷ್ಮಿ ರವರು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ನಿಪಿ-6 ದೂರಿನ ಮಾಹಿತಿ ಮೇರೆಗೆ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಕಲಂ.306 ನ್ನು ಅಳವಡಿಸಿಕೊಂಡು ತನಿಖೆ ನಡೆಸಲು ನ್ಯಾಯಾಲಯಕ್ಕೆ ಮನವಿ ಪತ್ರವನ್ನು ಸಿಬ್ಬಂದಿಯಾದ ಶ್ರೀನಿವಾಸ್ ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅದೇ ದಿನ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಡಬ್ಲ್ಯೂ ಪಿಸಿ 554 ಚಾಸಾ-24 ಸೌಭಾಗ್ಯ ರವರ ಜೊತೆ ತೆರಳಿ ಮೃತ ಲಕ್ಷ್ಮಿ ರವರ ಡೆತ್ ಇಂಟಿಮೇಷನ್ ಮೆಮೋವನ್ನು ಪಡೆದುಕೊಂಡಿರುತ್ತೇನೆ. ನಂತರ ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರದಲ್ಲಿ ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯವರೆವಿಗೆ ಸಾಕ್ಷಿದಾರರಾದ ಚಾಸಾ-7 ಸವಿತ, ಚಾಸಾ-8 ರಂಗಸ್ವಾಮಿ, ಚಾಸಾ-9 ಶೇಖರ್ ರವರ ಸಮಕ್ಷಮ ಮೃತ ಲಕ್ಷ್ಮಿ ರವರ ಶವದ ಮೇಲೆ ಶವಪಂಚನಾಮೆಯನ್ನು ತಯಾರಿಸಿರುತ್ತೇನೆ. ನಿಪಿ-12 ಶವಪಂಚನಾಮೆಯನ್ನು ತಯಾರಿಸಿದ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು. ಶವಪಂಚನಾಮೆ ಕಾಲದಲ್ಲಿ ಮೃತಳ ರಕ್ತಸಂಬಂಧಿಗಳಾದ ಚಾಸಾ-10 ಜಲನ್, ಚಾಸಾ-11 ಯೋಗೇಶ್, ಚಾಸಾ-12 ಜವರಯ್ಯ ಹಾಗೂ ಚಾಸಾ-13 ದುದ್ದಯ್ಯ ರವರ ಹೇಳಿಕೆಗಳನ್ನೂ ಸಹ ಪಡೆದುಕೊಂಡಿರುತ್ತೇನೆ. ಚಾಸಾ-10 ಜಲನ್ ನನ್ನ ಮುಂದೆ ನಿಪಿ-16 ಹಾಗೂ 17 ರಂತೆ, ಚಾಸಾ-12 ಜವರಯ್ಯ ನನ್ನ ಮುಂದೆ ನಿಪಿ-14 ರಂತೆ ಹಾಗೂ ಚಾಸಾ-13 ದುದ್ದಯ್ಯ ನನ್ನ ಮುಂದೆ ನಿಪಿ-13 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ನಂತರ ಕೆ ಆರ್ ಆಸ್ಪತ್ರೆಯ

ವೈದ್ಯರಿಗೆ ಮೃತೆ ಲಕ್ಷ್ಮಿ ರವರ ಶವಪರೀಕ್ಷೆ ಮಾಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ ಮಧ್ಯಾಹ್ನ ಪ್ರಕರಣದ ಕಡತವನ್ನು ಚಾಸಾ–20 ರವರಿಂದ ದಿನಾಂಕಃ 23.05.2016 ರಂದು ಪಡೆದುಕೊಂಡಿರುತ್ತೇನೆ. ಕಡತವನ್ನು ಪರಿಶೀಲಿಸಿರುತ್ತೇನೆ. ಎಫ್ ಎಸ್ ಎಲ್ ವರದಿ ಬರುವುದು ಬಾಕಿ ಇರುವುದು ಕಂಡು ಬರುತ್ತದೆ. ಎಫ್ ಎಸ್ ಎಲ್ ವರದಿಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ರವರ ಜೊತೆ ಪತ್ರ ವ್ಯವಹಾರ ಮಾಡಿರುತ್ತೇನೆ ಎಫ್ ಎಸ್ ಎಲ್ ವರದಿ ಬರುವುದು ತಡವಾಗಬಹುದು ಎಂದು ತಜ್ಞರು ತಿಳಿಸಿದ ಮೇರೆಗೆ ಸಾಕ್ಷಿದಾರರ ಹೇಳಿಕೆ ಅಧಾರದ ಮೇರೆಗೆ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಕೆ ಎಂ ಎಸ್ ವಕೀಲರಿಂದಃ**

3. ತನಿಖೆಯಲ್ಲಿ ಆರೋಪಿಗಳು ನಿರಪರಾಧಿಗಳು ಎಂದು ಕಂಡು ಬಂದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.